# ಸೌಂದರ್ಯ ಮೀಮಾಂಸೆ

ಇಂದು ಯುವಜನತೆಯ ಜೀವನಶೈಲಿಯೇ ಬದಲಾಗಿದೆ. ಚಿಂತನೆಗಳು ಬದಲಾಗಿವೆ. ಎಷ್ಟೋ ಸಂದರ್ಭಗಳಲ್ಲಿ ವಿಕಲ್ಪ ವೈಚಿತ್ರ್ಯಗಳೇ ಸೌಂದರ್ಯ ಎಂದು ನಂಬುವಷ್ಟು... ಹಾಗೇ ಬದುಕುವುದೇ ಚಂದ ಎನ್ನುವಷ್ಟು... ಸೌಂದರ್ಯವೆಂದರೆ ಹರಿದ ಬಟ್ಟೆಗಳೇ?.. ಸೌಂದರ್ಯಪ್ರಜ್ಞೆ ಕುರಿತ ಈ ಬರಹ ಚಿಂತನೆಗಳನ್ನು ಒರೆಗೆ ಹಚ್ಚುವಂತಿದೆ.

■ ಸವಿತಾ ಶಾಂತಪ್ರಿಯ



ಸೌಂದರ್ಯ ಎಂದರೇನು? ಅದು ಎಲ್ಲಿದೆ? ಯಾವುದು ಹೇಗಿದ್ದರೆ ಎಷ್ಟಿದ್ದರೆ ಚಂದ? ಸೌಂದರ್ಯದ ಮಾನದಂಡಗಳು ಯಾವುವು? ಸೌಂದರ್ಯಪ್ರಜ್ಞೆ ಎಂದರೆ ಯಾವುದು? ಹಿಂದೆ, ಇಂದು, ಮುಂದೆಯೂ ಯುವಜನತೆಯನ್ನು ಬಿಡದೆ ಕಾಡುವ ಚಿಂತನೆಗಳು ಇವು. ಪ್ರತಿಯೊಬ್ಬ ಹುಡುಗ ಅಥವಾ ಹುಡುಗಿಯೂ ತಾನು ಸುಂದರವಾಗಿರುವುದಕ್ಕಿಂತಲೂ ಸುಂದರವಾಗಿ ತೋರಬೇಕು, ಎಲ್ಲರಿಗಿಂತಲೂ ಹೆಚ್ಚು ಆಕರ್ಷಕವಾಗಿರಬೇಕು, ಎಲ್ಲರೂ ನನ್ನನ್ನೇ ಮೆಚ್ಚಬೇಕು ಎಂಬ ಚಿಂತನೆಯಲ್ಲೇ ಇರುತ್ತಾರೆ ಹಾಗೂ ಆ ಕಡೆಗೆ ನಿರಂತರ ಪ್ರಯತ್ನ ಮಾಡುತ್ತಲೇ ಇರುತ್ತಾರೆ.

ಕೆಲವರು ಸೌಂದರ್ಯ ನಮ್ಮ ಚರ್ಮದ ಬಣ್ಣ ಎಂದರೆ ಇನ್ನು ಕೆಲವರು ಕೂದಲು ಎನ್ನುತ್ತಾರೆ. ಕಣ್ಣುಗಳೇ ಸೌಂದರ್ಯದ ಕೇಂದ್ರಬಿಂದು. ಕಾಂತಿಯುಕ್ತ ಕಣ್ಣುಗಳಿದ್ದರೆ ಸಾಕು ಆ ನೋಟದಿಂದ ಜಗತ್ತೇ ಗೆಲ್ಲಬಹುದು ಎನ್ನುವ ಚಿಂತನೆ ಹಲವರದು. ಹೇಗೇ ಇರಲಿ ಅಲಂಕಾರ ಸಾಧನಗಳೇ ಸೌಂದರ್ಯವರ್ಧಕಗಳು, ಅವುಗಳನ್ನು ಬಳಸಿ ಎನ್ನುತ್ತವೆ ಕೆಲವು ಕಂಪೆನಿಗಳು. ನಾವು ಧರಿಸುವ ಉಡುಪು, ನಮ್ಮ ನಡವಳಿಕೆ, ನಮ್ಮ ಮಾತಿನ ಶೈಲಿ, ದೈಹಿಕ ಹಾವಭಾವ ಆಕರ್ಷಣೀಯವಾಗಿಟ್ಟುಕೊಳ್ಳುವುದೇ ಸೌಂದರ್ಯ ಎಂದು ಭಾವಿಸುವವರೇ ಹಲವರು. ಅತಿಯಾದ ಅಲಂಕಾರವೇ ಬೇಕು ಎಂದು ಕೆಲವರಿಗೆ ಅನ್ನಿಸಿದರೆ ಸರಳತೆಯ ಸೌಂದರ್ಯ ಅನ್ನುವವರು ಇನ್ನು ಕೆಲವರು. ಎರಡರ ನಡುವಿನ ಮಧ್ಯಮ ಹಾದಿಯೇ ಸೂಕ್ತ ಎನ್ನುವವರು ಅನೇಕರು. ನಮ್ಮೊಳಗಿನ ಆತ್ಮದ ಸೌಂದರ್ಯವೇ ನಿಜವಾದ ಸೌಂದರ್ಯ ಎನ್ನುವ ಆದರ್ಶದ ಮಾತುಗಳನ್ನು ಹೇಳುವವರು ವೇದಾಂತಿಗಳು.

ಸುಂದರವಾಗಿ ಆಕರ್ಷಕವಾಗಿ ಕಾಣುವುದೇ ಯುವಜನರ ಆಸೆ, ಅವರ ಕನಸು. ಅದು ಅವರಿಗೆ ವಯೋಸಹಜವೂ ಕೂಡ. ತಾವು ಹೇಗೇ ಇರಲಿ ಸುಂದರವಾಗಿ ಕಾಣಬೇಕು, ನಮ್ಮನ್ನು ಎಲ್ಲರೂ ಮೆಚ್ಚಬೇಕು ಎಂಬುದೇ ಅವರ ಬಯಕೆ. ಇದಕ್ಕಾಗಿ ಅವರು ನಿರಂತರ ಪ್ರಯತ್ನಿಸುತ್ತಲೇ ಇರುತ್ತಾರೆ. ತಮ್ಮ ಜೀವನಶೈಲಿಯನ್ನು ಅದಕ್ಕೆ ಒಗ್ಗಿಸಿಕೊಳ್ಳುತ್ತಾರೆ. ಕಾಲಕಾಲಕ್ಕೆ ಮಾರುಕಟ್ಟೆಗೆ ಲಗ್ಗೆ